**ಓ ಎಸ್ ನಂಃ 200-17**
**ಪಿ ಡಬ್ಲ್ಯೂ ಃ 1**

**ದಿಃ 08-09-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 5 ರಿಂದ 9 ನೇ ಪ್ರತಿವಾದಿ ಪರ ವಕೀಲರಿಂದ**

32. ನಾನು 7 ನೇ ತರಗತಿಯವರೆಗೆ ಓದಿರುತ್ತೇನೆ. ನನಗೆ ಕನ್ನಡ ಭಾಷೆ ಓದಲು ಬರೆಯಲು ಬರುತ್ತದೆ ಇಂಗ್ಲೀಷ್ ಭಾಷೆ ಬರುವುದಿಲ್ಲ. ನಾನು ಈ ದಾವೆಯನ್ನು 9 ಗುಂಟೆ ಜಮೀನಿನ ಮೇಲೆ ಹೂಡಿರುತ್ತೇನೆ. ನಾನು ಈ ದಾವೆಯನ್ನು ಕೃಷ್ಣಮೂರ್ತಿ ಹಾಗೂ 7 ನೇ ಪ್ರತಿವಾದಿಯ ವಿರುದ್ದ ಹೂಡಿರುತ್ತೇನೆ. ನಾನು ಈ ದಾವೆಯನ್ನು ದಾವಾ ಆಸ್ತಿ ನನಗೆ ಬೇಕು ಎಂದು ಕೇಳಿ ಹೂಡಿರುತ್ತೇನೆ. ದಾವಾ ಆಸ್ತಿ ಮೂಲತಃ ರಸೂಲ್ ರವರಿಗೆ ಸೇರಿದ್ದ ಆಸ್ತಿಯಾಗಿದ್ದು ಅದು ಅವರಿಗೆ ವಿಭಾಗದಲ್ಲಿ ಬಂದಿರುತ್ತದೆ. ರಸೂಲ್ ರವರ ತಮ್ಮನ ಹೆಂಡತಿಯಿಂದ ದಾವಾ ಆಸ್ತಿ ಲಿಯಾಕತ್ ರವರ ಹೆಸರಿಗೆ ಕ್ರಯ ಆಗಿರುತ್ತದೆ. ದಾವಾ ಆಸ್ತಿ ಮಹಮದ್ ಲಿಯಾಕತ್ ರವರಿಗೆ ನಸೀಂ ಉನ್ನಿಸಾ ಮತ್ತು ಅಲ್ಲಾ ಭಕ್ಷ್ ರವರ ಕಡೆಯಿಂದ ಕ್ರಯವಾಗಿರುತ್ತದೆ ಎಂದರೆ ನಿಜ. ಅದೇ ರೀತಿ 1 ನೇ ಪ್ರತಿವಾದಿಯ ಹೆಸರಿಗೆ ಎಂ ಆರ್ ನಂ 15/1998-99 ರಂತೆ ಖಾತೆಯಾಗಿರುತ್ತದೆ ಎಂದರೆ ನಿಜ. 1 ನೇ ಪ್ರತಿವಾದಿ ದಾವಾ ಆಸ್ತಿಯ ಸಂಪೂರ್ಣ ಮಾಲೀಕರಾಗಿ ಅನುಭವಿಸುತ್ತಾ ಬರುತ್ತಿದ್ದರು ಎಂದರೆ ನಿಜ. ಮಹಮ್ಮದ್ ಲಿಯಾಕತ್ ರವರು ನನಗೆ ದಾವಾ ಆಸ್ತಿಗೆ ಸಂಬಂದಿಸಿದಂತೆ ಯಾವುದೇ ದಾಖಲೆಗಳನ್ನು ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ನನ್ನ ಹೆಸರಿಗೆ ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತಾರೆ. 1 ನೇ ಪ್ರತಿವಾದಿ ನನಗೆ 2007 ರಲ್ಲಿ ಕ್ರಯದ ಕರಾರು ಪತ್ರವನ್ನು ಮಾಡಿಕೊಟ್ಟಿದ್ದು ನನಗೆ ದಿನಾಂಕ ಮತ್ತು ತಿಂಗಳು ಹೇಳಲು ಬರುವುದಿಲ್ಲ. 2007 ರ ಮುಂಚೆ ದಾವಾ ಆಸ್ತಿಯ ಬಗ್ಗೆ ಏನು ವ್ಯವಹಾರಗಳು ಆಗಿವೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ನನಗೆ ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟ ಬಗ್ಗೆ ಏನಾದರೂ ಕ್ರಮ ಜರುಗಿಸಿದ್ದಿರಾ ಎಂದರೆ ಈ ದಾವೆಯನ್ನು ಹೂಡಿರುತ್ತೇನೆ ಎಂದು ಹೇಳುತ್ತಾರೆ. ನನ್ನ ಮತ್ತು 1 ನೇ ಪ್ರತಿವಾದಿಯ ಮದ್ಯೆ 10 ಲಕ್ಷ ರೂಗಳಿಗೆ ಕ್ರಯದ ಕರಾರು ಪತ್ರ ಆಗಿದ್ದು ಆ ಬಗ್ಗೆ ನಾನು ವಿವಿಧ ದಿನಾಂಕಗಳಲ್ಲಿ 1 ನೇ ಪ್ರತಿವಾದಿಗೆ 3 ಲಕ್ಷ, 1 ಲಕ್ಷ, 1 ಲಕ್ಷ, 60 ಸಾವಿರಗಳನ್ನು ಕೊಟ್ಟಿದ್ದು ಬಾಕಿ ಮೊತ್ತವನ್ನು ನಾನು ನ್ಯಾಯಾಲಯದಲ್ಲಿ ಕಟ್ಟಿರುತ್ತೇನೆ. ನಾನು ಮೇಲೆ ಹೇಳಿದ ಮೊತ್ತದ ಚೆಕ್ ನ್ನು 1 ನೇ ಪ್ರತಿವಾದಿಯ ಹೆಸರಿಗೆ ಕೊಟ್ಟಿರುತ್ತೇನೆ. 1 ನೇ ಪ್ರತಿವಾದಿ 2007 ರಲ್ಲಿ ನನಗೆ ಯಾವುದೇ ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ನನಗೆ ಆದ ಕ್ರಯದ ಕರಾರು ಪತ್ರವನ್ನು 1 ನೇ ಪ್ರತಿವಾದಿ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ನನಗೆ ಕ್ರಯದ ಕರಾರು ಪತ್ರವನ್ನು 1 ನೇ ಪ್ರತಿವಾದಿ ಬರೆದುಕೊಟ್ಟಿಲ್ಲ ಬದಲಾಗಿ 3 ನೇ

ಪ್ರತಿವಾದಿ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಸರ್ವೆ ನಂ 62/1 ಎ ಇರುತ್ತದೆ. ದಾವಾ ಆಸ್ತಿಯ ಮೇಲೆ 3 ನೇ ಪ್ರತಿವಾದಿಗೆ ಯಾವುದೇ ಹಕ್ಕು ಇರಲಿಲ್ಲ ಎಂದರೆ 1 ನೇ ಪ್ರತಿವಾದಿ 3 ನೇ ಪ್ರತಿವಾದಿಯ ಹೆಸರಿಗೆ ಮುಕ್ತರುನಾಮೆಯನ್ನು ಬರೆದುಕೊಟ್ಟಿರುತ್ತಾರೆ ಎಂದು ಹೇಳುತ್ತಾರೆ. 3 ನೇ ಪ್ರತಿವಾದಿಗೆ ಆದ ಮುಕ್ತರುನಾಮೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಹೇಳುವ ಹಾಗೆ ಮುಕ್ತರುನಾಮೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

33. ಈ ನ್ಯಾಯಾಲಯದಲ್ಲಿ ಈ ಮೊದಲು ಹೂಡಿದ್ದ ದಾವೆಯ ಸಂಖ್ಯೆ ನನಗೆ ಗೊತ್ತಿಲ್ಲ. ಈ ಮೊದಲು ಹೂಡಿದ್ದ ದಾವೆಗೆ ಮಾಹಿತಿಯನ್ನು ವಕೀಲರಿಗೆ ನಾನೇ ಕೊಟ್ಟಿರುತ್ತೇನೆ. ಈ ಮೊದಲು ಹೂಡಿದ್ದ ದಾವೆಯಲ್ಲಿ ನಾನು 1 ನೇ ಪ್ರತಿವಾದಿಗೆ 5 ಲಕ್ಷದ 60 ಸಾವಿರ ರೂ ಹಣವನ್ನು ಕೊಟ್ಟ ಬಗ್ಗೆ ಬರೆಸಿರುತ್ತೇನೆ. ಆ ದಾವೆಯಲ್ಲಿ ನಾನು ಹಣವನ್ನು 3 ನೇ ಪ್ರತಿವಾದಿಗೆ ಕೊಟ್ಟಿರುತ್ತೇನೆಂದು ಬರೆಯಲಾಗಿದೆ ಎಂದರೆ 1 ಮತ್ತು 3 ನೇ ಪ್ರತಿವಾದಿ ಇಬ್ಬರು ಸೇರಿ ಪಡೆದಿರುತ್ತಾರೆ ಎಂದು ಹೇಳುತ್ತಾರೆ. ಈ ವಿಷಯವನ್ನು ಒ ಎಸ್ ನಂ 363/2012 ರ ವಾದ ಪತ್ರದಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. ಒ ಎಸ್ ನಂ 363/2012 ರ ವಾದ ಪತ್ರದಲ್ಲಿ 1 ನೇ ಪ್ರತಿವಾದಿ ನನಗೆ ದಾಖಲೆಯನ್ನು ಬರೆದುಕೊಟ್ಟಿರುತ್ತಾರೆಂದು ಹೇಳಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ನನಗೆ 500 ರೂಗಳ ಛಾಪಾ ಕಾಗದಗಳ ಮೇಲೆ ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತಾರೆ. ಕ್ರಯದ ಕರಾರು ಪತ್ರದ ಛಾಪಾ ಕಾಗದವನ್ನು ನಾನು ತಂದಿದ್ದು 1 ನೇ ಪ್ರತಿವಾದಿ ಸಹ ನನ್ನ ಜೊತೆ ಬಂದಿದ್ದರು. ಛಾಪಾ ಕಾಗದವನ್ನು 1 ನೇ ಪ್ರತಿವಾದಿಯ ಹೆಸರಿಗೆ ಖರೀದಿ ಮಾಡಲಾಗಿತ್ತು. ಛಾಪಾ ಕಾಗದವನ್ನು ನೆಲಮಂಗಲದಲ್ಲಿ ಟೈಪ್ ಮಾಡಿಸಲಾಗಿತ್ತು. ನಾನು ಆ ದಿನ 1 ನೇ ಪ್ರತಿವಾದಿಗೆ 3 ಲಕ್ಷ ರೂಗಳ ಚೆಕ್ ನ್ನು ಕೊಟ್ಟಿದ್ದೆ. ಆ ಸಮಯದಲ್ಲಿ ಸ್ಥಳದಲ್ಲಿ 3 ರಿಂದ 5 ಜನ ಇದ್ದರು. ನನಗೆ ಆದ ಕ್ರಯದ ಕರಾರು ಪತ್ರದಲ್ಲಿ 1 ಮತ್ತು 2 ನೇ ಪ್ರತಿವಾದಿಗಳು ಸಹಿ ಮಾಡಿರುತ್ತಾರೆ. ಕ್ರಯದ ಕರಾರು ಪತ್ರದಲ್ಲಿ 1 ಮತ್ತು 2 ನೇ ಪ್ರತಿವಾದಿಗಳನ್ನು ಹೊರತುಪಡಿಸಿ ಬೇರೆ ಯಾರು ಸಹಿ ಮಾಡಿಲ್ಲ. ಕ್ರಯದ ಕರಾರು ಪತ್ರವನ್ನು ಯಾರು ಟೈಪ್ ಮಾಡಿರುತ್ತಾರೆ ನೆನಪಿಲ್ಲ. ಕ್ರಯದ ಕರಾರುಪತ್ರವನ್ನು ಟೈಪ್ ಮಾಡಿದವರು ಸಹಿ ಮಾಡಿರುತ್ತಾರೋ ಇಲ್ಲವೋ ನೆನಪಿಲ್ಲ.

**ಈ ಹಂತದಲ್ಲಿ ಪಾಟೀ ಸವಾಲು ಮುಂದುವರೆಸಲು ಕಾಲವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ಮಾಗಡಿ.